1	2	3	4	5	6
5.	Byndur	0	0	1	1
6.	Karkala	0	0	1	1
	Total	**3**	**3**	**4**	**5**
	27) KARWAR				
1.	Ankola	0	0	0	0
2.	Bhatkal	0	0	0	0
3.	Haliyal	2	2	1	1
4.	Honnavar	0	0	1	0
5.	Karwar	0	0	0	1
6.	Kumta	2	0	1	0
7.	Mundagod	0	0	1	1
8.	Siddapur	0	0	1	0
9.	Sirsi	0	0	0	0
10.	Soopa	0	0	0	0
11.	Yellapur	0	0	1	0
	Total	**4**	**2**	**6**	**3**
	Grand Total	**253**	**128**	**492**	**250**

ರಾಜ್ಯದಲ್ಲಿನ ಅಂತರ್ಜಲ ಅಭಿವೃದ್ಧಿ

1076 (1385) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರ ಅಂತರ್ಜಲ ಅಭಿವೃದ್ಧಿಗೆ ಇಲಾಖಾ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ಇದುವರೆವಿಗೂ ಈ ಅಭಿವೃದ್ಧಿಗೆ ಏನೂ ಕೆಲಸ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಯಾವ ಯಾವ ಪ್ರದೇಶಗಳಲ್ಲಿ ಈ ಕಾರ್ಯಕ್ರಮ ಅಳವಡಿಸಿಕೊಳ್ಳಲಾಗಿದೆ ; ವಿವರವಾಗಿ ಮಾಹಿತಿ ನೀಡುವುದು ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ರಾಜ್ಯದಾದ್ಯಂತ ಅಂತರ್ಜಲ ಮಟ್ಟವನ್ನು ವೃದ್ಧಿ ಪಡಿಸುವ ಸಲುವಾಗಿ ಕ್ಲಿಷ್ಟಕರವೆಂದು ಘೋಷಿಸಿರುವ ತ್ಲಾಲೂಕುಗಳಲ್ಲಿ ಪ್ರಾಯೋಗಿಕವಾಗಿ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಇಲಾಖೆಯು 1995-96ನೇ ಸಾಲಿನಿಂದ ಪ್ರಾರಂಭಿಸಿದೆ. ಆದರಂತೆ, ಇದುವರೆಗೆ ಒಟ್ಟು 634 ವಿವಿಧ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಅಲ್ಲದೆ,

ಜಲಸಂಪನ್ಮೂಲ ಕ್ರೋಢೀಕರಣ ಯೋಜನೆ-ಅಂತರ್ಜಲ ಭಾಗ (Water Resources Consolidation Project-Groundwater Component) ಎಂಬ ಯೋಜನೆಯಡಿಯಲ್ಲಿ 58 ತಾಲ್ಲೂಕುಗಳಲ್ಲಿ 50,221 ಸಂಖ್ಯೆಯ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ರೂ. 471.00 ಕೋಟಿ ಅಂದಾಜು ವೆಚ್ಚದಲ್ಲಿ ಹಂತ ಹಂತವಾಗಿ 5 ವರ್ಷಗಳ ಅವಧಿಯಲ್ಲಿ ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಇಲಾಖೆಯು ರೂಪಿಸಿದೆ. ಈ ಯೋಜನೆಯನ್ನು ಹಣ ಸಹಾಯಕ್ಕಾಗಿ ವಿಶ್ವಬ್ಯಾಂಕಿಗೆ ಕಳುಹಿಸಲಾಗಿದೆ. ಈ ಯೋಜನೆಯು ವಿಶ್ವಬ್ಯಾಂಕಿನ ಪರಿಶೀಲನೆಯಲ್ಲಿದೆ.

ಅ) ಬಂದಿದೆ. ಇಲಾಖಾ ಮತಿಯಿಂದ ಪ್ರಾಯೋಗಿಕವಾಗಿ ಅಂತರ್ಜಲ ಕೃತಕ ಮರುಪೂರೈಕೆ ರಚನೆಗಳನ್ನು ಮೇಲೆ ಹೇಳಿದಂತೆ ರಚಿಸಲಾಗಿದೆ. ಆದರೆ, ಇಂತಹ ಇನ್ನೂ ಸಾವಿರಾರು ರಚನೆಗಳ ನಿರ್ಮಾಣದ ಅಗತ್ಯವಿರುವುದರಿಂದ, ವಿಶ್ವಬ್ಯಾಂಕ್ ನೆರವಿಗೆ ಒಂದು ಯೋಜನೆಯನ್ನು ತಯಾರಿಸಿ ಕಳುಹಿಸಲಾಗಿದ್ದು, ಅದು ವಿಶ್ವಬ್ಯಾಂಕಿನ ಪರಿಶೀಲನೆಯಲ್ಲಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಜಿಲ್ಲಾವಾರು ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳ ವಿವರಗಳು
(1995-96 ರಿಂದ 2001-2002)

ಕ್ರಮ ಸಂಖ್ಯೆ	ಜಿಲ್ಲೆ	ವಿವರಗಳು	
		ರಚನೆಗಳ ಸಂಖ್ಯೆ	ವೆಚ್ಚ ರೂ. ಲಕ್ಷಗಳಲ್ಲಿ
1.	ಬೆಂಗಳೂರು	122	152.35
2.	ಬೆಳಗಾಂ	62	69.43
3.	ಬಳ್ಳಾರಿ	28	25.22
4.	ಬೀದರ್	40	36.74
5.	ಬಿಜಾಪುರ	4	3.00
6.	ಚಾಮರಾಜನಗರ	40	20.21
7.	ಚಿಕ್ಕಮಗಳೂರು	3	7.94
8.	ಚಿತ್ರದುರ್ಗ	79	56.39
9.	ದಕ್ಷಿಣ ಕನ್ನಡ	3	3.94
10.	ಧಾರವಾಡ	3	2.85
11.	ಗುಲ್ಬರ್ಗ	9	2.00
12.	ಹಾಸನ	34	29.35
13.	ಕೋಲಾರ	64	101.02
14.	ಕೊಪ್ಪಳ	6	5.18
15.	ಮಂಡ್ಯ	17	6.87
16.	ಮೈಸೂರು	28	19.71

17.	ರಾಯಚೂರು	19	12.59
18.	ಶಿವಮೊಗ್ಗ	7	12.75
19.	ತುಮಕೂರು	64	58.85
20.	ಉತ್ತರ ಕನ್ನಡ	2	2.00
	ಒಟ್ಟು	634	628.39

ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳ ಸ್ಥಾಪನೆ

1077 (1386) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಪಶುವೈದ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ ?

ಆ) ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಪಶು ವೈದ್ಯಕೀಯ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ತೀರ್ಮಾನಿಸಿದೆಯೇ ?

ಇ) ಪಶು ಪ್ರಾಣಿಗಳಿಗನುಗುಣವಾಗಿ ಪಶು ಚಿಕಿತ್ಸಾ ಕೇಂದ್ರಗಳು ರಾಜ್ಯದಲ್ಲಿವೆಯೇ ?

ಈ) ಈ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶು ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಇವುಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಊ) ಪಶು ಸಂಗೋಪನಾ ವಿಶ್ವವಿದ್ಯಾಲಯ ರಚಿಸಲು ಈ ನಿಟ್ಟಿನಲ್ಲಿ ಸರ್ಕಾರ ವೇನಾದರೂ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಈವರೆಗೆ ಅಂತಿಮ ನಿರ್ಣಯ ಇನ್ನೂ ಕೈಗೊಂಡಿಲ್ಲ.

ಆ) ಇಲ್ಲ

ಇ) ಇವೆ

ಈ) ಬಂದಿದೆ

ಉ) 577 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುತ್ತಿದೆ. ಆದರಲ್ಲಿ ಮೊದಲನೆಯ ಹಂತದಲ್ಲಿ 250 ಹುದ್ದೆಗಳನ್ನು ಅರ್ಹತೆ ಮತ್ತು ಮಿಸಲಾತಿಗನುಗುಣವಾಗಿ ಸದ್ಯದಲ್ಲಿ ತುಂಬಲಾಗುವುದು.

ಊ) ಪರಿಶೀಲನೆಯಲ್ಲಿದೆ. ಇನ್ನೂ ಅಂತಿಮ ನಿರ್ಣಯ ಕೈಗೊಂಡಿರುವುದಿಲ್ಲ.

ಕಾರವಾರ ಬಂದರುಗಳ ಅಭಿವೃದ್ಧಿ ಯೋಜನೆ

1078 (1350) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕದ ಕಾರವಾದ ಬಂದರು ರಾಷ್ಟ್ರದ ಮಹತ್ವದ ಬಂದರು ಎಂದು ಪರಿಗಣಿಸಿದೆಯೇ ?